ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ರುದ್ರಭೂಮಿಯಲ್ಲಿ ಗಿಡ ಬೆಳೆಸುವುದೇಕೆ?*



ಗಿಡ ಬೆಳೆದು ಮರವಾಗಲೆಂದು; ಮೋಹಿನಿಯೊಡನೆ ಡ್ಯುಯೆಟ್ ಹಾಡಬೇಕಾದರೆ ಮರ ಇರಬೇಕಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು

*ಗಂಡಾಂತರ ಎಂದರೇನು?*

ಒಬ್ಬನಿಗೆ ಡೈವೋರ್ಸ್ ಕೊಟ್ಟು ಮತ್ತೊಬ್ಬನನ್ನು ಮದುವೆಯಾಗುವುದರ ನಡುವಿನ ಸಮಯ.

ಕೆ.ಪಿ. ಸುಜ್ಞಾನಾಚಾರ್ಯ, ಕಲಿಕೆರೆ

*ನಾಯಿ, ಕತ್ತೆ, ಕೋತಿಗಳೂ ಗುಂಪಿನಿಂದ ಗುಂಪಿಗೆ ಪಕ್ಷಾಂತರ ಮಾಡುವುದಿಲ್ಲವಲ್ಲಾ...?*

ಹಾಗೆ ಮಾಡಿ ರಾಜಕಾರಣಿ ಎಂದು ಬೈಸಿಕೊಳ್ಳಲು ಅವಕ್ಕೆ ಸ್ವಾಭಿಮಾನ ಅಡ್ಡ ಬರುತ್ತದಂತೆ.

ಓಂ ಚನ್ನೇಶ್ವ ಭದ್ರಾವತಿ

*ಪ್ರಸಿದ್ಧ ದೇವರುಗಳ ದೇವಸ್ಥಾನಗಳನ್ನು ಬೆಟ್ಟ ಗುಡ್ಡಗಳ ಮೇಲೆಯೇ ಕಟ್ಟಲು ಕಾರಣವೇನು?*



ಊರೊಳಗಿದ್ದರೆ ಟ್ರಾಫಿಕ್‌ಜ್ಯಾಮ್ ಆಗಿ ಭಕ್ತಾದಿಗಳು ಹಿಡಿಶಾಪ ಹಾಕಿಯಾರೆಂಬ ಭಯವಂತೆ ದೇವನಿಗೆ.

ಎನ್. ಗೋಪಾಲರಾವ್, ಬೆಂಗಳೂರು

*ಸಾವಿಲ್ಲದ ಅಮರತ್ವವನ್ನು ಪಡೆಯಲು ಯಾವ ದೇವರನ್ನು ಕುರಿತು ಹೇಗೆ ತಪಸ್ಸು ಮಾಡಬೇಕು?*

ಶ್ರೇಷ್ಠ ಸಾಧನೆ ಎಂಬ ದೇವರನ್ನು ಪರಿಶ್ರಮದ ತಪಸ್ಸಿನಿಂದ ಪಡೆಯಲು ಯತ್ನಿಸಿ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಮುಹೂರ್ತ ಒಂದೂವರೆ ಗಂಟೆ ಇದ್ದರೂ ಕೊನೆಯ ಘಳಿಗೆಯಲ್ಲೇ ತಾಳಿ ಕಟ್ಟುವುದು ಏಕೆ?*

ಗಂಡಿನ ಆತುರವನ್ನು ಮಟ್ಟ ಹಾಕಲು ಅದೇ ಫಸ್ಟ್ ಸ್ಟೆಪ್.

ಜಾಕೋಬ್ ಡಿಸೋಜ, ಕುರುವಳ್ಳಿ

*ರಾಮರಾಜ್ಯ ಒಳ್ಳೆಯದೋ, ರಾವಣರಾಜ್ಯ ಒಳ್ಳೆಯದೋ?*

ಪ್ರಶ್ನಿಸಿದವರು ಮಾನವರೋ, ರಾಕ್ಷಸರೋ ಎಂಬುದರ ಮೇಲೆ ಉತ್ತರ ಬದಲಾಗುತ್ತದೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಗೊರಕೆಗೂ, ಪೊರಕೆಗೂ ಏನು ಸಂಬಂಧ?*

ಎರಡೂ 'ಕೀಪ್ ಡಿಸ್ಟೆನ್ಸ್' ಎಂಬ ಸಂದೇಶ ಸಾರುವಂತಹವೇ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಈ ಜೀವನದಲ್ಲಿ ಸುಖಕ್ಕಿಂತ ಕಷ್ಟಗಳೇ ಬರಲು ಕಾರಣವೇನು?*

ಹಾಗೇನಿಲ್ಲ. ಸುಖವನ್ನು ಎತ್ತರದಿಂದ, ಕಷ್ಟವನ್ನು ಬೂದುಗಾಜಿನಿಂದ ನೋಡುವುದರಿಂದ ಹಾಗೆನಿಸುವುದಷ್ಟೆ.

ಮುರಲೀಧರ ಕುಲಕರ್ಣಿ, ಬೀದರ

*ಸ್ತ್ರೀಯರಿಗೆ ಬೇರೆಯವರ ಸೀರೆ, ಒಡವೆಗಳೇ ಏಕೆ ಸುಂದರವಾಗಿ ಕಾಣುತ್ತವೆ?*

ಗಂಡಸರಿಗೆ ಬೇರೆಯವರ ಹೆಂಡತಿಯರೇ ಚೆನ್ನಾಗಿ ಕಾಣಿಸುತ್ತಾರಲ್ಲಾ, ಇದೂ ಹಾಗೆಯೇ.

ಟಿ.ಆರ್. ರವೀಂದ್ರ, ಬೆಂಗಳೂರು

*ನವರಸಗಳಲ್ಲಿ ನಿಮಗೆ ಅತ್ಯಂತ ಇಷ್ಟವಾದ ರಸ ಯಾವುದು? ಏಕೆ?*

ಕ್ಷಣ ಕಾಲವಾದರೂ ಚಿಂತೆ, ನೋವು ಮರೆಯಿಸುವ ಶುದ್ಧ ಹಾಸ್ಯರಸ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಗಂಡನಿತ್ತ ಹೋಟೆಲ್ ಊಟಕ್ಕಿಂತ ನಲ್ಲನಿತ್ತ ಫುಟ್‌ಪಾತ್ ಪಾನಿಪುರಿಯೇ ರುಚಿಕರವಂತೆ?*

ಇದು ಘಮಲು; ಅದು ಅಮಲು. ಅಮಲು ನೀಡುವ ಕಿಕ್ ಅನ್ನು ಘಮಲು ನೀಡದು.

ಎಂ.ಎ. ಕುಮಾರ್, ಬೆಂಗಳೂರು

*ಹರಕೆ ಹೊತ್ತು ದೇವರಿಗೆ ಕೂದಲು ಕೊಡುವ ಪರಿಪಾಠ ಬಂದಿದ್ದು ಹೇಗೆ?*

ಬಹುಶಃ ಬೋಳಿಸಿಕೊಳ್ಳಲು ಇನ್ನು ಏನೇನೂ ಉಳಿದಿರದಿದ್ದಾಗ.

## ಬಹುಮಾನಿತ ಪ್ರಶ್ನೆ

ಪಿ. ಶಂಕರಪ್ಪ, ವಕೀಲರು

*ಹನಿಟ್ರ್ಯಾಪ್‌ಗೆ ಬಲಿಯಾಗುವವರ ಸಂಖ್ಯೆ ಹೆಚ್ಚಾಗಲು ಕಾರಣ ಹಣವೋ, ಹೆಣ್ಣೋ?*

ಎರಡೂ ಅಲ್ಲ; ಗಂಡಿನ ಕಾಮದಾಹ. ಕಾಮಕ್ಕೆ ಕಡಿವಾಣ ಹಾಕಿದರೆ ಹನಿಟ್ರ್ಯಾಪ್ ಫುಲ್ ಸ್ಟಾಪ್.

ರಾಮದಾಸ ಉಡುಪ, ಬೆಂಗಳೂರು

*ಕನ್ನಡದ ಹೋರಾಟಗಾರರೂ ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮದ ಶಾಲೆಗೆ ಕಳುಹಿಸುವುದೇಕೆ?*

ಅದು ಶತ್ರುಪಾಳ್ಯಕ್ಕೆ ನುಗ್ಗಿ ಅದನ್ನು ಧ್ವಂಸ ಮಾಡಿ ಗೆಲ್ಲುವ ಹಳೆಯ ಯುದ್ಧತಂತ್ರವಂತೆ.

ಫ್ಲೇಟ್ ಪ್ರಕಾಶ್, ಹೊಸನಗರ

*ಇಲ್ಲೊಬ್ಬ ಹೆಂಡತಿಯಲ್ಲೇ ಹೆಂಡ ಕಾಣುವ ಅಂತಾನಲ್ಲಾ...?*

ಸ್ವರಿಯಾದ ಕಿಕ್ ನೀಡಿದ್ದಾಳಂತೆ!

ಯಶೋದಾ ಶಿವಣ್ಣ ಶೆಟ್ಟಿ, ಅಜೆಕಾರು

*ಓಟು ಎಂದರೆ ಹಣವೇ ಅಲ್ಲವೆ? ಬೇಗನೆ ಉತ್ತರಿಸಿ.*



ಊಹೂಂ. ಓಟು ಪ್ರಜಾಪ್ರಭುತ್ವದ O2(ಆಮ್ಲಜನಕ).

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಸಾಯುವುದಕ್ಕೆ ಮುಂಚೆಯೇ ಅಳುವುದಕ್ಕೆ ಆರಂಭಿಸುವುದು ಇತ್ತೀಚೆಗೆ ಹೆಚ್ಚುತ್ತಿರುವ ಕಾರಣ...?*

ನಾಟಕಕ್ಕೆ ಮುಂಚೆ ರಿಹರ್ಸಲ್ ಮಾಡುವುದು ಒಳ್ಳೆಯದು.

ಎ.ಕೆ. ಪಟ್ಟಾಭಿ, ಬೆಂಗಳೂರು

*ಇಲ್ಲೊಬ್ಬ ಶಿಷ್ಯ 'ಮಂತ್ರಿ ಮಹೋದಯ' ಎನ್ನಯ್ಯ ಎಂದರೆ 'ಮಂತ್ರಿ ಮಹೋದರ' ಎನ್ನುವನಲ್ಲಾ...?*

ಅವನು ವಾಸಿ. ಇಲ್ಲೊಬ್ಬ 'ಮಂತ್ರಿ ಮಹಾದಯ್ಯ' ಎಂದು ನಿಜವನ್ನೇ ಹೇಳುತ್ತಾನೆ.

■ ರಾಮ್